ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-234338

**CHAMUNDESHWARI ELECTRICITY SUPPLY CORPORATION LIMITED**
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID:gmhrd@cescmysore.org

Company Identity Number[CIN]:- **U40109KA2004SGC035177**

ಕ್ರಮಾಂಕ : ಚಾವಿಸನಿನಿ/ಆ&ಮಾ.ಸಂ/02/ಎಂ.ಎಫ್-26/2022-23/ cys-1222 ದಿನಾಂಕ: 14 NOV 2022

## ಸುತ್ತೋಲೆ

ವಿಷಯ: ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸುವಲ್ಲಿ ಆಗುವ ವಿಳಂಬವನ್ನು ತಡೆಗಟ್ಟುವ ಕುರಿತು.

ಉಲ್ಲೇಖ: 1. ನಿರ್ದೇಶಕರು(ಆ&ಮಾಂ), ಕವಿಪ್ರನಿನಿ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ21/ಬಿ16/7228/85-86 ದಿನಾಂಕ: 25.01.2022
2. ಚಾವಿಸನಿನಿ ನಿರ್ದೇಶಕ ಮಂಡಳಿಯ ಠರಾವು ಸಂಖ್ಯೆ: 97/ ದಿನಾಂಕ: 21.10.2022.

*******

ಇಲಾಖಾ ವಿಚಾರಣೆಗೆ ಆದೇಶಿಸಿರುವ ಇತ್ಯರ್ಥಗೊಂಡಿರುವ ಹಾಗೂ ಬಾಕಿ ಉಳಿದಿರುವ ಹಾಗೂ ಮೇಲ್ಮನವಿಗಳಿಗೆ ಸಂಬಂಧಿಸಿಂತೆ ಪ್ರತಿ ಮಾಹೆ ವೃತ್ತ/ವಿಭಾಗಗಳ ವ್ಯಾಪ್ತಿಯಿಂದ ಪಡೆದು ಕ್ರೋಢೀಕರಿಸಿ ವಲಯ ಕಛೇರಿಗಳಿಂದ ನಿಗಮಕ್ಕೆ ಸಲ್ಲಿಸುತ್ತಿರುವ ವಿವರಣಾ ಪಟ್ಟಿಯನ್ನು ಪರಿಶೀಲಿಸಲಾಗಿ ಹಲವಾರು ಪ್ರಕರಣಗಳಲ್ಲಿ ಇಲಾಖಾ ವಿಚಾರಣೆ ಆದೇಶಿಸಿ ಹಲವು ತಿಂಗಳುಗಳ ನಂತರವೂ ವಿಚಾರಣೆ ಪ್ರಗತಿಯಲ್ಲಿರುತ್ತದೆ ಎಂದು ಮಾಹಿತಿ ಸಲ್ಲಿಸಲಾಗುತ್ತಿರುವದು ಕಂಡು ಬಂದಿರುತ್ತದೆ.

ಉಲ್ಲೇಖ(1)ರ ಕವಿಪ್ರನಿನಿ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ21/ಬಿ16/7228/85-86 ದಿನಾಂಕ: 25.01.2022ರಲ್ಲಿ ಅಧಿಕಾರಿ/ನೌಕರರ ಮೇಲಿನ ಆಪಾದಿತ ದುರ್ನಡತೆಗೆ ಸಂಬಂಧಿಸಿದಂತೆ ಕವಿಪ್ರನಿನಿ ನೌಕರರ (ವರ್ಗೀಕರಣ ಶಿಸ್ತು ನಿಯಂತ್ರಣ ಮತ್ತು ಮೇಲ್ಮನವಿ) ನಿಬಂಧನೆ-1987ರ ನಿಬಂಧನೆ 11 ಮತ್ತು ನಿಬಂಧನೆ-12 ರಡಿಯಲ್ಲಿ ಶಿಸ್ತು ಕ್ರಮ ಕೈಗೊಳ್ಳುವಾಗ ಸರ್ಕಾರದ ಸುತ್ತೋಲೆಗಳಲ್ಲಿ ನಿಗದಿಪಡಿಸಿರುವ ಕಾಲಮಿತಿಯನ್ನು ಎಲ್ಲಾ ಶಿಸ್ತು ಪ್ರಾಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿರುತ್ತಾರೆ.

ಉಲ್ಲೇಖ(2)ರ ಮಂಡಳಿ ಸಭೆಯ ಠರಾವುನಲ್ಲಿ ನಿರ್ದೇಶಕ ಮಂಡಳಿಯು ಚಾವಿಸನಿನಿ ವ್ಯಾಪ್ತಿಯ ಇಲಾಖಾ ವಿಚಾರಣೆ ಪ್ರಕರಣಗಳನ್ನು ನಿಗದಿತ ಅವಧಿಯೊಳಗೆ ಇತ್ಯರ್ಥಗೊಳಿಸುವಂತೆ ಹಾಗೂ ಇಲಾಖಾ ವಿಚಾರಣೆ ಪ್ರಕರಣಗಳಲ್ಲಿ ನಿಗಮದ ನಿಯಮಗಳ ಬಗ್ಗೆ ಹೆಚ್ಚಿನ ಜ್ಞಾನವಿರುವ ಹಿರಿಯ ಅಧಿಕಾರಿಗಳನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸುವಂತೆ ಮತ್ತು ನಿಗಮಕ್ಕೆ ಉಂಟಾಗಿರುವ ಆರ್ಥಿಕ ನಷ್ಟವನ್ನು ಸಂಬಂಧಿಸಿದ ಆರೋಪಿತರಿಂದ ಅವರ ಸೇವಾವಧಿಯೊಳಗೆ ವಸೂಲಾತಿ ಮಾಡಿಕೊಳ್ಳಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳಲು ನಿರ್ದೇಶಿಸಿರುತ್ತದೆ.

ಆದ್ದರಿಂದ ಎಲ್ಲಾ ಶಿಸ್ತು ಪ್ರಾಧಿಕಾರಿಗಳು ಇಲಾಖಾ ವಿಚಾರಣೆಗಳನ್ನು ನಿಗದಿತ ಕಾಲಮಿತಿಯೊಳಗೆ ಮುಕ್ತಾಯಗೊಳಿಸಲು ಉಲ್ಲೇಖ(1) ಮತ್ತು (2)ರಲ್ಲಿನ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.

ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದಿಸಲ್ಪಟ್ಟಿದೆ.

ಪ್ರಧಾನ ವ್ಯವಸ್ಥಾಪಕರು(ಆ&ಮಾಸಂ)
ಚಾವಿಸನಿನಿ., ಮೈಸೂರು.

**ಪ್ರತಿಗಳು:**

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ), ಚಾವಿಸನಿನಿ, ಮೈಸೂರು.
2. ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ, ಮೈಸೂರು/ಹಾಸನ.
3. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾವಿಸನಿನಿ.
4. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನೆ ವೃತ್ತ, ಚಾವಿಸನಿನಿ.
5. ಕಂಪನಿ ಕಾರ್ಯದರ್ಶಿ, ನಿಗಮ ಕಚೇರಿ, ಚಾವಿಸನಿನಿ, ಮೈಸೂರು ಇವರ ಮಾಹಿತಿಗಾಗಿ.
6. ಉಪ ಪ್ರಧಾನ ವ್ಯವಸ್ಥಾಪಕರು(ಎಂಐಎಸ್), ಚಾವಿಸನಿನಿ, ನಿಗಮ ಕಛೇರಿ, ನಿಗಮದ ವೆಬ್‌ಸೈಟ್ ನಲ್ಲಿ ಪ್ರಕಟಿಸಲು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ.
8. ಎಲ್ಲಾ ಲೆಕ್ಕಾಧಿಕಾರಿ(ಆಂ.ಪ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ.
9. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂತ್ರಿಕ)/ಮುಖ್ಯ ಆರ್ಥಿಕ ಅಧಿಕಾರಿರವರುಗಳ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತ, ಸುತ್ತೋಲೆಯ ಮಾಹಿತಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ತಾಂತ್ರಿಕ)/ಮುಖ್ಯ ಆರ್ಥಿಕ ಅಧಿಕಾರಿಯವರ ಗಮನಕ್ಕೆ ತರುವಂತೆ ಕೋರಿದೆ.
10. ಉಪಾಧ್ಯಕ್ಷರು, ಚಾವಿಸನಿನಿ, ನೌಕರರ ಸಂಘ, (ರಿ ೬೫೯), ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
11. ಉಪಾಧ್ಯಕ್ಷರು, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, (ರಿ), ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
12. ಉಪಾಧ್ಯಕ್ಷರು, ಡಿಪ್ಲೋಮ, ಇಂಜಿನಿಯರ್‌ಗಳ ಸಂಘ, ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
13. ಉಪಾಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಕಡಕೊಳ, ಮೈಸೂರು.
14. ಕಾರ್ಯದರ್ಶಿ, ಚಾವಿಸನಿನಿ, ಲೆಕ್ಕಾಧಿಕಾರಿಗಳ ಸಂಘ, ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
15. ವ್ಯ-1/ಪ್ರ.ಕ.